ನಿಗಧಿಪಡಿಸಲಾಗಿತ್ತು. ಹಾಗೂ ಕಾರಣಾಂತರಗಳಿಂದ ಪೂರ್ಣಗೊಳಿಸುವ ದಿನಾಂಕವನ್ನು ಜೂನ್ 2016ಕ್ಕೆ ಪರಿಷ್ಕರಿಸಿದ್ದು, ಅದರಂತೆ ಪೂರ್ಣಗೊಳಿಸಲು ಕಾರ್ಯಕ್ರಮವನ್ನು ರೂಪಿಸಲಾಗಿರುತ್ತದೆ.

ಈ) ಕಾಮಗಾರಿಯು ಪೂರ್ಣಗೊಂಡ ನಂತರ ಕಾರ್ಯಾಚರಣೆಗೆ ಬಿಟ್ಟುಕೊಡಲಾಗುವುದು.

ಎಪಿಎಲ್ ಕಾರ್ಡುದಾರರಿಗೆ ಸೀಮೆಎಣ್ಣೆ

3309 (3634); ಶ್ರೀ ಸೋಮಶೇಖರ್ ಎಸ್.ಟಿ. (ಯಶವಂತಪುರ)

ಅ) ಅನೇಕ ಪಡಿತರ ಕಾರ್ಡುದಾರರು (ಅನಿಲ ರಹಿತ) ಸೀಮೆಎಣ್ಣೆಯನ್ನು ಪಡೆಯದೇ ಇರುವುದರಿಂದ ಕಳ್ಳಸಂತೆಯಲ್ಲಿ ಲಭ್ಯವಾಗುತ್ತಿರುವುದು ಹಾಗೂ ದಾಸ್ತಾನು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಸೀಮೆಎಣ್ಣೆಯನ್ನು ಎಪಿಎಲ್ ಕಾರ್ಡುದಾರರಿಗೂ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ರೂಪಿಸಿರುವ ಯೋಜನೆಯ ವಿವರ ನೀಡುವುದು?

ಶ್ರೀ ದಿನೇಶ ಗುಂಡೂರಾವ್ (ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು)

ಅ) ಇಲ್ಲ, ಅನಿಲ ರಹಿತ ಪಡಿತರ ಚೀಟಿದಾರರು ಸೀಮೆಎಣ್ಣೆಯನ್ನು ಪಡೆಯದ ಸಂದರ್ಭದಲ್ಲಿ ಅವರಿಗೆ ವಿತರಿಸಬೇಕಾಗಿರುವ ಸೀಮೆಎಣ್ಣೆಯ ಪ್ರಮಾಣವು ನ್ಯಾಯಬೆಲೆ ಅಂಗಡಿ/ ಚಿಲ್ಲರೆ ಸೀಮೆಎಣ್ಣೆ ವಿತರಕರ ಬಳಿ ಉಳಿಯಲಿದ್ದು, ಆ ಪ್ರಮಾಣವನ್ನು ನ್ಯಾಯಬೆಲೆ ಅಂಗಡಿ/ ಚಿಲ್ಲರೆ ಸೀಮೆಎಣ್ಣೆ ವಿತರಕರು ತಿಂಗಳಾಂತ್ಯದಲ್ಲಿ ಅಂತಿಮ ಶಿಲ್ಕೆಂದು ಘೋಷಿಸಬೇಕಾಗಿರುತ್ತದೆ. ನಂತರದ ತಿಂಗಳಿನಲ್ಲಿ ಹಂಚಿಕೆ ಮಾಡುವ ಪ್ರಮಾಣದಲ್ಲಿ ಕಳೆದ ತಿಂಗಳಾಂತ್ಯದಲ್ಲಿ ಘೋಷಿಸಲಾದ ಅಂತಿಮ ಶಿಲ್ಕಿನ ಪ್ರಮಾಣವನ್ನು ಕಳೆದು ಉಳಿಕೆ ಪ್ರಮಾಣವನ್ನು ಮಾತ್ರ ಹಂಚಿಕೆ

ಮಾಡಲಾಗುವುದರಿಂದ ದಾಸ್ತಾನು ಹೆಚ್ಚಾಗುವ ಸಾಧ್ಯತೆಗಳಿರುವುದಿಲ್ಲ. ಹಾಗೂ ಪ್ರತಿ ಮಾಹೆ ಸೀಮೆಎಣ್ಣೆ ವಿತರಣೆಗೆ ಸಂಬಂಧಿಸಿದಂತೆ ಫಲಾನುಭವಿಗಳ ಪಟ್ಟಿಯನ್ನು ಪ್ರತಿ ಸೀಮೆಎಣ್ಣೆ ವಿತರಕರಿಗೆ ನೀಡಲಾಗುವುದು. ಸೀಮೆಎಣ್ಣೆ ಪಡೆಯುವ ಪಡಿತರ ಚೀಟಿದಾರರು ಸದರಿ ಪಟ್ಟಿಯಲ್ಲಿ ಕಡ್ಡಾಯವಾಗಿ ಸಹಿಯನ್ನು ಮಾಡಬೇಕಾಗುತ್ತದೆ. ಆದ್ದರಿಂದ ಸೀಮೆಎಣ್ಣೆ ಎತ್ತುವಳಿ ಮಾಡಲು ಬಾಕಿ ಇರುವ ಪ್ರಮಾಣವನ್ನು ಇಲಾಖೆಗೆ ಸೀಮೆಎಣ್ಣೆ ವಿತರಕರು ನೀಡಬೇಕಾಗುತ್ತದೆ. ಈ ರೀತಿ ಉಳಿಯುವ ಪ್ರಮಾಣವನ್ನು ಮುಂದಿನ ಮಾಹೆಯ ಹಂಚಿಕೆಯಲ್ಲಿ ಕಡಿತಗೊಳಿಸಿ ನೀಡಲಾಗುವುದು.

ಆ) ಪ್ರಸ್ತುತ, ಗ್ರಾಮಾಂತರ ಪ್ರದೇಶದ ಎಪಿಎಲ್ ಅನಿಲ ರಹಿತ ಪಡಿತರ ಚೀಟಿದಾರರಿಗೆ 2 ಲೀ. ನಂತೆ ಸೀಮೆಎಣ್ಣೆಯನ್ನು ವಿತರಿಸಲಾಗುತ್ತಿದೆ. ನಗರ/ ಪಟ್ಟಣ ಪ್ರದೇಶದ ಎಪಿಎಲ್ ಅನಿಲ ರಹಿತ ಪಡಿತರ ಚೀಟಿದಾರರಿಗೆ ಸೀಮೆಎಣ್ಣೆಯನ್ನು ಒದಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಇ) ಎಪಿಎಲ್ ಅನಿಲ ರಹಿತ ಪಡಿತರ ಚೀಟಿದಾರರಿಗೆ ಸೀಮೆಎಣ್ಣೆ ವಿತರಿಸುವುದಕ್ಕೆ ಸಂಬಂಧಿಸಿದಂತೆ ಯಾವುದೇ ಯೋಜನೆಯನ್ನು ಇಲಾಖಾ ವತಿಯಿಂದ ರೂಪಿಸಿರುವುದಿಲ್ಲ.